**ಚಾಸಾಃ 8  ಪ್ರಾಸಾಃ 11**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ**

**ಸಿ.ಸಿ ಸಂಖ್ಯೆ: 201/2025**

ಹೆಸರು :ಚರಿತ್
ತಂದೆಯ ಹೆಸರು :ಗೋಪಾಲ
ಪ್ರಾಯ :30 ವರ್ಷ
ಉದ್ಯೋಗ :ವೈನ್ ಶಾಪ್ ನಲ್ಲಿ ಕೆಲಸ
ವಾಸ :ಸುಳ್ಯ ಗ್ರಾಮ, ಸುಳ್ಯ ತಾಲೂಕು

**ದಿನಾಂಕ 26.03.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು ಗಾಂಧಿನಗರದ ಪ್ರಕಾಶ್ ವೈನ್ ಶಾಪ್ ನಲ್ಲಿ ಕೆಲಸ ಮಾಡುತ್ತೇನೆ. ಚಾಸಾ-7 ಕುಶಾಲಪ್ಪ ಮತ್ತು ನವೀನ ಶೆಟ್ಟಿ ರವರು ಪ್ರಕಾಶ್ ವೈನ್ಸ್ ನ ಮಾಲೀಕರಾಗಿರುತ್ತಾರೆ. ಈ ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ಇರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಈ ಪ್ರಕರಣದ ಕುರಿತು ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.**

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ</u>**

ದಿ. 27.11.2024 ರಂದು ಪೊಲೀಸರು ಆರೋಪಿತನನ್ನು ಪ್ರಕಾಶ್ ವೈನ್ಸ ಬಳಿ ಕರೆದುಕೊಂಡು ಬಂದಿದ್ದು ಆ ಸಮಯಲ್ಲಿ ಆರೋಪಿ ದಿ. 23.11.2024 ರಂದು ಬೆಳಿಗ್ಗೆ 11 ಗಂಟೆಗೆ ಚಾಸಾ–7 ರವರಿಂದ ತಲಾ 90 ಎಂ.ಎಲ್ ನ 22 ಮೈಸೂರು ಲ್ಯಾನ್ಸರ್ ಟೆಟ್ರಾ ಪ್ಯಾಕೆಟ್ ಗಳನ್ನು ಖರೀದಿ ಮಾಡಿರುವುದಾಗಿ ಮತ್ತು ಅದೇ ದಿನ ನನ್ನಿಂದ ಬೆಳಿಗ್ಗೆ 11.30 ಗಂಟೆಗೆ ತಲಾ 90 ಎಂ.ಎಲ್ ನ 22 ಮೈಸೂರು ಲ್ಯಾನ್ಸರ್ ಟೆಟ್ರಾ ಪ್ಯಾಕೆಟ್ ಗಳನ್ನು ಖರೀದಿ ಮಾಡಿರುವುದಾಗಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಟಾಟ್ರಾ ಪ್ಯಾಕೆಟ್ ಗಳನ್ನು ಆರೋಪಿ ತನ್ನ ಅಂಗಡಿಯಲ್ಲಿ ಇಟ್ಟು ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡುವುದಾಗಿ ನಮ್ಮ ಮುಂದೆ ಹೇಳಿರುತ್ತಾನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊಲೀಸರು ನಿಪಿ–19 ರಂತೆ ಪ್ರಕಾಶ್ ವೈನ್ ಶಾಪ್ ನ ಉದ್ದಿಮೆ ಪರವಾನಿಗೆ ಪತ್ರ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಸಂಪೂರ್ಣ ಭಾಗವನ್ನು ಸಾಕ್ಷಿಗೆ ಓದಿ ಹೇಳಿ ಕೇಳಲಾಗಿ ಸಾಕ್ಷಿ ನಿರಾಕರಿಸಿದ ಮೇರೆಗೆ ಹೇಳಿಕೆಯನ್ನು ನಿಪಿ–25 ಎಂದು ಗುರುತಿಸಲಾಯಿತು.

ಎಂ.ಒ.1 ರಲ್ಲಿರುವ 44 ವಿಸ್ಕಿ ಪ್ಯಾಕೆಟ್ ಗಳು ಎಂದರೆ ಅದನ್ನು ಗುರುತಿಸಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ಎಂ.ಒ.1 ನಮ್ಮ ಅಂಗಡಿಗೆ ಸೇರಿದ್ದರೂ ಸಹ ಅವುಗಳನ್ನು ಗುರುತಿಸಲು ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಅಂಗಡಿಗೆ ಯಾವ ಸೀರಿಯಲ್ ನಂಬರಿಗೆ ಮದ್ಯದ ಸ್ಯಾಚೆಟ್ ಗಳು ವಿತರಣೆ ಆಗುತ್ತವೆ ಎಂಬ ಬಗ್ಗೆ ಮಳಿಗೆಯ ವ್ಯವಸ್ಥಾಪಕರ ಬಳಿ ಮಾಹಿತಿ ಇರುತ್ತದೆ ಎಂದರೆ ಸರಿ. ಆ ಬಗ್ಗೆ ನಮ್ಮ ಮಳಿಗೆಗೆ ವಿತರಣೆ ಆದ ಬಗ್ಗೆ ನಿಪಿ–15 ರಲ್ಲಿ ನಮೂದು ಇದೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ನನ್ನ ವ್ಯವಹಾರದ ಸಲುವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ.</u>**

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ